## Mysuru Mithra

**Date:** 01-04-2022 **Page No:** 9

**Edition:** Mysore **Language:** Kannada

# ಸಾಧನೆಗೆ 'ಕಠಿಣ ಪರಿಶ್ರಮ' ಬಿಟ್ಟರೆ ಪರ್ಯಾಯ ಮಾರ್ಗವಿಲ್ಲ

**● ಎಸ್‌ಡಿಎಂ–ಐಎಂಡಿ ಘಟಿಕೋತ್ಸವದಲ್ಲಿ ಕಾಮನ್ವೆಲ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ(ಇಂಡಿಯಾ) ವ್ಯವಸ್ಥಾಪಕ ನಿರ್ದೇಶಕಿ ಪಂಕಜಂ ಶ್ರೀದೇವಿ ಅಭಿಮತ ● 181 ವಿದ್ಯಾರ್ಥಿಗಳಿಗೆ ಗಣ್ಯರಿಂದ ಪದವಿ ಪ್ರದಾನ**




ಮೈಸೂರಿನ ಎಸ್‌ಡಿಎಂಐಎಂಡಿ ಸಂಸ್ಥೆಯ 27ನೇ ಘಟಿಕೋತ್ಸವದಲ್ಲಿ ಸಂಸ್ಥೆಯ ಅಧ್ಯಕ್ಷರೂ ಆದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗಡೆ, ಕಾಮನ್ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಇಂಡಿಯಾ) ವ್ಯವಸ್ಥಾಪಕ ನಿರ್ದೇಶಕಿ ಪಂಕಜಂ ಶ್ರೀದೇವಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಚಿತ್ರದಲ್ಲಿದ್ದಾರೆ.

ಮೈಸೂರು, ಮಾ.31(ಎಸ್‌ಬಿಡಿ)– ಮಹಾನ್ ನಾಯಕರು ಹಾಗೂ ಸಾಧಕರದಲ್ಲಿ ಸಾಮಾನ್ಯವಾಗಿರುವುದು 'ಕಠಿಣ ಪರಿಶ್ರಮ'. ಇದಕ್ಕೆ ಪರ್ಯಾಯವಾದುದು ಯಾವುದೂ ಇಲ್ಲ ಎಂದು ಕಾಮನ್ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಇಂಡಿಯಾ) ವ್ಯವಸ್ಥಾಪಕ ನಿರ್ದೇಶಕಿ ಪಂಕಜಂ ಶ್ರೀದೇವಿ ವಿಧ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂ–ಐಎಂಡಿ)ನ 27ನೇ ಘಟಿಕೋತ್ಸವದಲ್ಲಿ ಗುರುವಾರ ಘಟಿಕೋತ್ಸವ ಭಾಷಣ ಮಾಡಿದ ಅವರು, ಈ ಸಂಸ್ಥೆಯ ಅಧ್ಯಕ್ಷರೂ ಆದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗಡೆ, ಅಜೀಂ ಪ್ರೇಮ್‌ಜಿ, ಕಿರಣ್ ಮಜುಂದಾರ್ ಅವರಂತಹ ಮಹಾನ್ ನಾಯಕರು ದೊಡ್ಡ ಕನಸು ಕಂಡು ಅದನ್ನು ಕಠಿಣ ಪರಿಶ್ರಮದಿಂದ ಸಾಕಾರಗೊಳಿಸಿಕೊಂಡಿದ್ದಾರೆ. ಸೂಕ್ಷ್ಮವಾಗಿ ಗಮನಿಸಿದರೆ ಎಲ್ಲಾ ಮಹಾನ್ ನಾಯಕರಲ್ಲೂ ಕಠಿಣ ಪರಿಶ್ರಮ ಸಾಮಾನ್ಯವಾಗಿ ಕಂಡುಬರುತ್ತದೆ. ನೀವೂ ಕೂಡ ದೊಡ್ಡ ಕನಸುಗಳನ್ನು ಕಂಡು ಕಠಿಣ ಪರಿಶ್ರಮದ ಹಾದಿಯಲ್ಲಿ ಸಾಧಿಸಬೇಕೆಂದು ಆಶಿಸಿದರು.

ಕಠಿಣ ಪರಿಶ್ರಮದ ಜೊತೆಗೆ ಸಾಧಿಸುವ ಉತ್ಸಾಹ ಹಾಗೂ ಬದ್ಧತೆ ಇರಲಿ. ಶಿಕ್ಷಕರು ಹಾಗೂ ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗಾಗಿ ನಿಸ್ವಾರ್ಥದಿಂದ ಕೆಲಸ ಮಾಡುತ್ತಾರೆ. ಇವರೇ ನಿಮ್ಮ ಶಕ್ತಿಯ ಮೂಲವಾಗಿದ್ದಾರೆ. ಸದಾ ನಿಮ್ಮ ಯಶಸ್ಸನ್ನು ಬಯಸುತ್ತಾರೆ. ಹಾಗಾಗಿ ನೀವು ಅವರ ಮಾತನ್ನು ಆಲಿಸಿ, ಪಾಲಿಸಬೇಕು. ಉತ್ತಮ ಸಾಧನೆ ಮೂಲಕ ಅವರ ಪರಿಶ್ರಮದ ಮೌಲ್ಯ ಹೆಚ್ಚಿಸಬೇಕು. ಬುದ್ಧಿವಂತಿಕೆ ಉಡುಗೊರೆಯಂತೆ. ಆದರೆ ಒಳ್ಳೆಯತನ ನಿಮ್ಮ ಆಯ್ಕೆಯಾಗಿರುತ್ತವೆ. ಇವೆರಡೂ ಬಹಳ ಮುಖ್ಯವಾಗುತ್ತವೆ. ಜೀವನದ ಪ್ರತಿ ಹೆಜ್ಜೆಯಲ್ಲೂ ಒಳ್ಳೆಯದನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ನಿಮ್ಮ ಬಗ್ಗೆ ಇತರರಾಡುವ ಮಾತುಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ನೀವು ಯೋಚಿಸುವುದಕ್ಕಿಂತಲೂ ನೀವು ಉತ್ತಮರು ಎಂದು ತಿಳಿದುಕೊಳ್ಳಿ. ಕೆಲಸ ಮತ್ತು ವೈಯಕ್ತಿಕ ಜೀವನದ ಸಮತೋಲನ ಕಾಪಾಡಿಕೊಳ್ಳುವುದು ಮುಖ್ಯ. ಇದು ಹೆಚ್ಚಿನದಾಗಿ ಮಹಿಳೆಯರಿಗೆ ಸವಾಲಾಗಬಹುದು. ಹಾಗಂತ ಅವಕಾಶಗಳು ಎದುರಾದಾಗ ವಿಮುಖರಾಗಬೇಡಿ. ಹೊರ ದೇಶಗಳಲ್ಲಿ ಕಾರ್ಯನಿರ್ವಹಿಸುವ ಅವಕಾಶಗಳನ್ನು ಮಹಿಳೆಯರು ಕಳೆದುಕೊಳ್ಳಬೇಡಿ. ಕುಟುಂಬದವರ ಜೊತೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಂಡರೆ ಎಲ್ಲವೂ ಸಾಧ್ಯ. ಸ್ವಿಟ್ಜರ್‌ಲೆಂಡ್‌ನಲ್ಲಿ ಕಾರ್ಯನಿರ್ವಹಿಸುವ ಅವಕಾಶ ಸಿಕ್ಕಾಗ ನಾನೂ ಗೊಂದಲಕ್ಕೆ ಸಿಲುಕಿದ್ದೆ. ಕಡೆಗೆ ಪತಿ ಧೈರ್ಯ ತುಂಬಿದ್ದರಿಂದ ವಿದೇಶಕ್ಕೆ ತೆರಳಿದೆ. ಹಲವು ದಿನ 9 ವರ್ಷದ ಮಗನನ್ನು ಬಿಟ್ಟಿರುವ ನೋವಿನಲ್ಲಿ ಕಣ್ಣೀರಿಟ್ಟಿದ್ದೆ ಎಂದು ತಮ್ಮ ಜೀವನದ ಸಂಗತಿಗಳನ್ನು ಉದಾಹರಿಸಿ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿದರು.

**ಪದವಿ ಪ್ರಧಾನ:** ಎರಡು ಚಿನ್ನದ ಪದಕ ಪಡೆದ ಸಂಜನಾ ವಿಜಯ್‌ಕುಮಾರ್ ಹಾಗೂ ಸುದೀಪ್ ಎಸ್.ರಾವ್, ಒಂದು ಚಿನ್ನದ ಪದಕ ಪಡೆದ ಹೆಚ್.ಅನಿರುದ್ಧ ಹಂಡೆ, ಸೀತಾಲಕ್ಷ್ಮಿ ಸತೀಶ್ ಹೆಗ್ಡೆ, ಯಶ್ ಶರ್ಮ ಮುಕುಂದ್, ಎಂ.ಅಭಿನಯ್ ಹಾಗೂ ಪ್ರಕೃತಿ ವಿವೇಕಾನಂದ ಸೇರಿದಂತೆ ಪಿಜಿ ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಪೂರೈಸಿದ 181 ವಿದ್ಯಾರ್ಥಿಗಳಿಗೆ ಗಣ್ಯರು ಪದವಿ ಪ್ರದಾನ ಮಾಡಿದರು.

ಸಮಾರಂಭದಲ್ಲಿ ಎಸ್‌ಡಿಎಂ–ಐಎಂಡಿ ಅಧ್ಯಕ್ಷರೂ ಆದ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗಡೆ, ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್, ಉಪನಿರ್ದೇಶಕ ಪ್ರಸಾದ್, ಶೈಕ್ಷಣಿಕ ಆಡಳಿತಗಾರ ಎಂ.ವಿ.ಸುನಿಲ್, ಸಂಸ್ಥೆಯ ಪ್ರಸನ್ನ ಚಂದ್ರ, ರಾಜ್ ಅಗರ್‌ವಾಲ್, ನಾಗರಾಜ್, ಡಿ.ಸುಂದರ ಕುಮಾರ್, ಕಮಲ್ ಬಾಲಿ, ವಿಜು ಪರಮೇಶ್ವರ್, ನಿಶಿತ್ ಜೈನ್, ಭೀಮರಾಯ ಮೇತ್ರಿ, ಆರ್.ಇಂದಿರಾ ಮತ್ತಿತರರು ಉಪಸ್ಥಿತರಿದ್ದರು.

## ವಿದ್ಯಾವಂತೆಯರು ಉದ್ಯೋಗಸ್ಥರಾಗಬೇಕು

### ಶ್ರೀ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗಡೆ ಆಶಯ

ಮೈಸೂರು: ಶಿಕ್ಷಣ ಪಡೆದಿರುವ ಮಹಿಳೆಯರು ಗೃಹಿಣಿಯಾಗಿ ಮನೆಯಲ್ಲೇ ಇರದೆ, ಉದ್ಯೋಗಸ್ಥರಾಗಬೇಕು ಎಂದು ಶ್ರೀ ಧರ್ಮಸ್ಥಳ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಆಶಯ ವ್ಯಕ್ತಪಡಿಸಿದರು.

ಎಸ್‌ಡಿಎಂ–ಐಎಂಡಿ 27ನೇ ಘಟಿಕೋತ್ಸವದಲ್ಲಿ ಮಾತನಾಡಿ, ಶಿಕ್ಷಣ ಪಡೆದ ಶೇ.30ರಷ್ಟು ಮಹಿಳೆಯರು ಉದ್ಯೋಗ ಸೇರದೆ ಗೃಹಿಣಿಯರಾಗಿ ಮನೆಯಲ್ಲೇ ಇರುತ್ತಾರೆ. ಶಿಕ್ಷಣದ ಜೊತೆಗೆ ಉತ್ತಮ ಪ್ರತಿಭೆಯುಳ್ಳ ನೀವು, ಸಂಸಾರ ನಿರ್ವಹಣೆ ಜೊತೆಗೆ ಬೇರೆ ಉದ್ಯೋಗವನ್ನೂ ಮಾಡಬಹುದು. ಈ ಮೂಲಕ ಸಮಾಜಕ್ಕೆ ತಮ್ಮದೇ ಕೊಡುಗೆ ನೀಡಬಹುದು ಎಂದು ಕಿವಿಮಾತು ಹೇಳಿದರು.

ನಮ್ಮ ಸಂಸ್ಥೆಯಲ್ಲಿರುವ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.40 ಹೆಣ್ಣು ಮಕ್ಕಳಿದ್ದಾರೆ. ಇವರೆಲ್ಲಾ ಮೆರಿಟ್ ಆಧಾರದಲ್ಲೇ ಪ್ರವೇಶ ಪಡೆದಿರುವುದು ವಿಶೇಷ. ಮಹಿಳೆಯರಲ್ಲಿ ಅಗಾಧ ಪ್ರತಿಭೆ ಇದೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ಮಹಿಳೆಯರಿಗೆ ಮೀಸಲಾತಿ ಕೇಳುವುದು ಎಲ್ಲರಿಗೂ ಗೊತ್ತಿದೆ. ಆದರೆ ಹೆಣ್ಣುಮಕ್ಕಳ ಪ್ರತಿಭೆ ಗಮನಿಸಿದರೆ ಮುಂದಿನ 10 ವರ್ಷಗಳಲ್ಲಿ ಹುಡುಗರಿಗೆ ಮೀಸಲಾತಿ ಕೇಳುವ ಸಂದರ್ಭ ಬರಬಹುದು. ವಿದ್ಯಾಭ್ಯಾಸದ ಸಂದರ್ಭದಲ್ಲೇ ಭವಿಷ್ಯದ ಗುರಿ ಸ್ಪಷ್ಟವಾಗಿರಬೇಕು. ಯಾವ ವಿದ್ಯಾರ್ಥಿಯಲ್ಲೂ ಕೀಳರಿಮೆ ಇರಬಾರದು. ಕಠಿಣ ಪರಿಶ್ರಮದಿಂದ ಸಾಧಿಸುವುದರ ಜೊತೆಗೆ ಮೌಲ್ಯಗಳನ್ನು ಕಾಪಾಡಿಕೊಂಡು ಸಾಮಾಜಿಕ ಜವಾಬ್ದಾರಿಯನ್ನೂ ನಿರ್ವಹಿಸಬೇಕೆಂದು ತಿಳಿಸಿದ ಅವರು, ಸಂಸ್ಥೆಯ ಘಟಿಕೋತ್ಸವಗಳಲ್ಲಿ ಮೊದಲ ಬಾರಿ ಮಹಿಳಾ ಸಾಧಕಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದಾರೆ ಎಂದು ಪಂಕಜಂ ಶ್ರೀದೇವಿ ಅವರಿಗೆ ಅಭಿನಂದನೆ ತಿಳಿಸಿದರು.